THE HINDU
Dated, Saturday, 029h July– 2017
Pg.No.15

# MEDICAL COUNCIL OF INDIA

Pocket-14, Sector-8, Phase-1, Dwarka, New Delhi-110077

## PUBLIC NOTICE

It has come to the notice of Medical Council of India that certain unscrupulous elements are misleading students by alluring them that they would get them admitted in MBBS course in Medical Colleges. By way of this Public Notice all the candidates seeking admission in MBBS in Medical college falling within the purview of the Indian Medical Council Act. 1956 are cautioned not be misled by such unscrupulous elements.

2. It is brought to the notice of all concerned that admissions for MBBS in all Medical Colleges falling within the purview of Indian Medical Council Act, 1956 from the academic year 2017-18 onwards has to be through the common counseling conducted by the Directorate General of Health Services, Ministry of Health and Family Welfare, Government of India for All India Quota Seats and MBBS seats in the Medical Colleges of Deemed Universities and the Designated Authority of State/Union Territory Government in respect of State Quota seats in Government Medical Colleges and for all MBBS seats in non-governmental Medical Colleges.

3. It is also informed that an "Advisory for Students seeking Admission in MBBS" has been posted on the website of the MCI: www.mcindia.org which contains the list of Medical Colleges that have not been granted permission by the Central Government for making admission in MBBS for the Academic Year 2017-18. Prospective candidates are cautioned not to be misled and desist from taking admission in the debarred Medical Colleges. Any admission in a Medical College that has either not been granted permission by the Central Government or is contrary to the Regulations of the Council in the Permitted/Recognized College are void ab initio. The status of permission of a Medical College can be verified from the MCI website.

(Dr. Reena Nayyar)
Secretary (I/C)

ವಿಜಯವಾಣಿ



# ಅಲೋಪಥಿ ವೈದ್ಯರಿಗೆ ಇನ್ನು ಸಿಗಲಿದೆ ಪ್ರತ್ಯೇಕ ಟ್ರೇಡ್‌ಮಾರ್ಕ್

» ಐಪಿಒದಿಂದ ಹಸಿರು ನಿಶಾನೆ

» ಸಾರ್ವಜನಿಕರಿಗೆ ಸಹಕಾರಿ




**ನವದೆಹಲಿ:** ಅಲೋಪಥಿ ವೈದ್ಯರಿಗೆ ವಿಶೇಷ ಗುರುತಿನ ಚಿಹ್ನೆ ನೀಡಲು ಭಾರತೀಯ ವೈದ್ಯಕೀಯ ಸಂಘ (ಐಎಂಎ) ನಿರ್ಧರಿಸಿದೆ. ಅಸಲಿ ಅಲೋಪಥಿ ವೈದ್ಯರನ್ನು ಗುರುತಿಸಲು ಈ ಚಿಹ್ನೆ ಸಹಕಾರಿಯಾಗಲಿದೆ.

ಬಿಳಿ ಬಣ್ಣದ ಹಿನ್ನೆಲೆಯಲ್ಲಿರುವ ರೆಡ್ ಕ್ರಾಸ್ ಪಟ್ಟಿಯ ಮೇಲೆ 'ಡಿಆರ್' ಎಂದು ಆಂಗ್ಲ ಭಾಷೆಯಲ್ಲಿ ಬರೆಯಲಾಗಿದೆ. ಈ ಚಿಹ್ನೆಗೆ ಇಂಟಲೆಕ್ಚುವಲ್ ಪ್ರಾಪರ್ಟಿ ಕಚೇರಿ (ಐಪಿಒ) ಈಗಾಗಲೇ ನಿರಾಕ್ಷೇಪಣಾ ಪತ್ರ ನೀಡಿದೆ. ಅಲೋಪಥಿ ವಿಧಾನ ವೈದ್ಯಕೀಯ ಶಿಕ್ಷಣ ಪಡೆದು ವೈದ್ಯರಾದವರಿಗೆ ಚಿಹ್ನೆ ಉಪಯೋಗಿಸಲು ಅವಕಾಶ ನೀಡಲಾಗುತ್ತದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಐಎಂಎ ಅಧ್ಯಕ್ಷ ಡಾ. ಕೆ.ಕೆ. ಅಗರ್ವಾಲ್, ಅಲೋಪಥಿ ವೈದ್ಯರಿಗೆ ವಿಶೇಷ ಚಿಹ್ನೆ ನೀಡಲು ಡಿಸೈನ್‌ಗಳನ್ನು ಸೂಚಿಸುವಂತೆ ಕೋರಲಾಗಿತ್ತು. ದೇಶದ ವಿವಿಧ ವೈದ್ಯರು 110 ಡಿಸೈನ್‌ಗಳನ್ನು ಕಳುಹಿಸಿ ಕೊಟ್ಟಿದ್ದರು. ಇವುಗಳಲ್ಲಿ ಸೂಕ್ತ ಎನಿಸಿದ ಒಂದು ಚಿಹ್ನೆ ಆಯ್ಕೆ ಮಾಡಲಾಗಿದೆ ಎಂದಿದ್ದಾರೆ.

## ಉಪಯೋಗಗಳೇನು?

ಕೆಲವೊಮ್ಮೆ ಅಲೋಪಥಿ ವಿಧಾನವನ್ನು ಅಧ್ಯಯನ ಮಾಡದ ವೈದ್ಯರು ಕೂಡ ಅಲೋಪಥಿ ಔಷಧ ಸೂಚಿಸುತ್ತಾರೆ. ಸಾರ್ವಜನಿಕರಿಗೆ ಅಲೋಪಥಿ ವೈದ್ಯರು ಯಾರು ಎಂಬುದನ್ನು ಕರಾರುವಕ್ಕಾಗಿ ಗುರುತಿಸಲು ಚಿಹ್ನೆ ಸಹಕಾರಿಯಾಗಲಿದೆ. ಜತೆಗೆ ನಕಲಿ ವೈದ್ಯರನ್ನು ಪತ್ತೆ ಹಚ್ಚಲು ಐಎಂಎಗೆ ಸಹಕಾರಿಯಾಗಲಿದೆ.

## ರೆಡ್ ಕ್ರಾಸ್ ಚಿಹ್ನೆಗೆ ಹೋಲಿಕೆ

ಅಂತಾರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿ ಚಿಹ್ನೆ ಹಾಗೂ ಅಲೋಪಥಿ ವೈದ್ಯರಿಗೆ ನೀಡಲು ಉದ್ದೇಶಿಸಿರುವ ಚಿಹ್ನೆಗೆ ಕೊಂಚ ಹೋಲಿಕೆ ಇದೆ. ಆದರೆ, ಐಎಂಎ ಅಧಿಕಾರಿಗಳು ಇದನ್ನು ಅಲ್ಲಗಳೆದಿದ್ದಾರೆ. ಚಿಹ್ನೆಗೆ ಕೊಂಚ ತಿಳಿ ಬಣ್ಣ ನೀಡಲಾಗಿದೆ ಮತ್ತು ಮಧ್ಯದಲ್ಲಿ 'ಡಿಆರ್' ಎಂದು ಆಂಗ್ಲ ಭಾಷೆಯಲ್ಲಿ ಬರೆಯಲಾಗಿದೆ. ಹೀಗಾಗಿ ರೆಡ್ ಕ್ರಾಸ್ ಚಿಹ್ನೆಗೂ ಇದಕ್ಕೂ ಯಾವುದೇ ಹೋಲಿಕೆ ಇಲ್ಲ ಎಂದು ಅವರು ಸ್ಪಷ್ಟನೆ ನೀಡಿದ್ದಾರೆ.

ಮಿನಿ ಸುದ್ದಿ

## ■ ಇಂದು ಆರೋಗ್ಯ ತಪಾಸಣೆ ಶಿಬಿರ

ಕೋಲಾರ: ಆರ್.ಎಲ್.ಜಾಲಪ್ಪ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಶ್ರೀದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯ, ಪೀಸ್ ಚಾರಿಟೇಬಲ್ ಟ್ರಸ್ಟ್ ಹಾಗೂ ಯುವಜನ ಮತ್ತು ಅಭಿವೃದ್ಧಿ ಸಂಸ್ಥೆ ವತಿಯಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಶನಿವಾರ ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 2ರ ವರೆಗೆ ಇಲ್ಲಿನ ರಹಮತ್ ನಗರದ ಹಿರಿಯ ಪ್ರಾಥಮಿಕ ಉರ್ದು ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ವೈದ್ಯಕೀಯ ತಜ್ಞರು, ಸ್ತ್ರೀ ರೋಗ, ಶಸ್ತ್ರ ಚಿಕಿತ್ಸೆ, ಮೂಳೆ ರೋಗ, ತಾಯಿ ಮತ್ತು ಮಕ್ಕಳ, ಕಿವಿ ಮತ್ತು ಗಂಟಲು, ಕಣ್ಣು, ಚರ್ಮ ಹಾಗೂ ದಂತ ತಜ್ಞರು ಭಾಗವಹಿಸಿ ತಪಾಸಣೆ ನಡೆಸಿ ಚಿಕಿತ್ಸೆ ನೀಡುವರು. ಶಿಬಿರದಲ್ಲಿ ಉಚಿತವಾಗಿ ಬಿಪಿ ಮತ್ತು ಸಕ್ಕರೆ ಕಾಯಿಲೆ ತಪಾಸಣೆ ಮಾಡಿ ಔಷಧಿಗಳನ್ನು ನೀಡಲಾಗುವುದು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಸೌಲಭ್ಯವನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ಪೀಸ್ ಚಾರಿಟೇಬಲ್ ಟ್ರಸ್ಟ್‌ನ ಕಾರ್ಯದರ್ಶಿ ಆಸೀಫ್ ಪಾಷಾ ಕೋರಿದ್ದಾರೆ.